ಆ ಹುಡುಗಿ ಅಷ್ಟೇ ಸುಲಭವಾಗಿ ಸ್ನೇಹ ಮಾಡಿಕೊಳ್ಳುತ್ತಾಳೆ. ಅಷ್ಟೇ ಸುಲಭವಾಗಿ ಜಗಳ ಮಾಡುತ್ತಾಳೆ. ಮಾರ್ಗರೆಟ್ ಪಾರ್ಟಿ ಗರ್ಲ್ ಎಂದು ಮೊದಲೇ ತಿಳಿದಿರುವುದರಿಂದ ಶ್ರಿಯಾ ಸ್ವಲ್ಪ ಜಾಗ್ರತೆಯಾಗಿಯೇ ಇರುತ್ತಿದ್ದಳು.

'ಪ್ಲಾನ್ ಬಿ ಪ್ರೋಗ್ರಾಮ್ ಅಲ್ಲವೇ. ವರ್ಕ್ ಡಬಲ್ ಇರುತ್ತದೆ' ಏನೂ ತಿಳಿಯದವಳಂತೆ ತಪ್ಪಿಸಿಕೊಳ್ಳಲು ಪ್ರಯತ್ನಮಾಡಿದಳು. ಆದರೆ, ಮಾರ್ಗರೆಟ್ ಅದೇನನ್ನು ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. 'ಅಂದರೆ ಪಾರ್ಟಿ, ಫನ್ ಏನೂ ಬೇಡವೆಂದು ರೂಲೇನು? ಕಮಾನ್ ಶ್ರೀ, ಓನ್ಲೀ ಟು ನೈಟ್. ಯೂಥ್ಲೀಟ್ಸ್ ಪಾರ್ಟೀ. ಆಫ್ ಕ್ಯಾಂಪಸ್ – ಹಾಟ್ ಹಾಟ್ ನೈಟ್' ಮೂರೇ ಮಾತುಗಳಲ್ಲಿ ಹೇಳಿ ಯಾರ್‍ಯಾರು ಬರುವವರಿದ್ದಾರೆಂದು ಹೆಸರುಗಳೊಡನೆ ಹೇಳುತ್ತಾ ಬಾಯಲ್ಲಿ ನೀರೂರಿಸುವಂತೆ ಶ್ರಿಯಾಳ ಮನಸ್ಸು ಸ್ವಲ್ಪ ತೂಗಾಡಿತು. 'ಒಂದು ನೈಟ್ ಅಲ್ಲವೇ! ಒಂದೇ ಪಾರ್ಟೀಯಲ್ಲವೇ!' ಎಂದುಕೊಳ್ಳುತ್ತಾ ಓದುತ್ತಿರುವ ಪುಸ್ತಕಗಳನ್ನು ಬದಿಗಿರಿಸಿದಳು.

ಸಂತೋಷದಿಂದ ನಿಜವಾಗಿಯೂ ಕುಣಿದಾಡಿದಳು ಮಾರ್ಗರೆಟ್. ಶ್ರಿಯಾ ರೆಡಿ ಆಗುವವರೆಗೂ ಅವಸರಪಡಿಸಿದಳು. 'ನಿನ್ನಂಥಾ ಕ್ಯೂಟ್, ಎ ಗ್ರೇಡ್ ತರುವಂಥಾ ಹುಡುಗಿ ಪಕ್ಕದಲ್ಲಿದ್ದರೆ ನನ್ನ ಕಡೆಗೂ ಯಾರಾದರೂ ನೋಡುತ್ತಾರೆಂಬ ಕಾರಣಕ್ಕೆ ಕರೆಯುತ್ತಿದ್ದೇನೆ' ಎಂದು ಕಣ್ಣು ಹೊಡೆಯುತ್ತಾ ಶ್ರಿಯಾಳನ್ನು ಮತ್ತಿಷ್ಟು ಉತ್ತೇಜನಗೊಳಿಸಿದಳು.

ಪಾರ್ಟಿ ನಡೆಯಲಿರುವ ಮನೆಗೆ ಊಬರ್‌ನಲ್ಲಿ ಹೊರಟರು. ಬಿಸಿಲು, ಬೇಗೆ ಇರುವುದರಿಂದಾಗಿ ಹುಡುಗರೆಲ್ಲಾ ಅಂಗೀ ಬಿಚ್ಚಿ ಮೈ, ಕೈ, ತೋರಿಸುತ್ತಾ ಹುಡುಗಿಯರ ದೃಷ್ಟಿಯನ್ನು ಸೆಳೆಯುತ್ತಿದ್ದರು. ದೊಡ್ಡ ಸೌಂಡ್‌ನೊಂದಿಗೆ ಹಾಡುಗಳು, ನಗೆ, ಮಾತುಕತೆಗಳ ಗದ್ದಲ, ದೊಡ್ಡ ದೊಡ್ಡ ಕೂಲರ್ಸ್‌ನಲ್ಲಿರುವ ಬೀರ್ ಬಾಟಲ್ಸ್ ಖಾಲೀ ಆಗುತ್ತಿದ್ದಂತೆಯೇ ಮತ್ತೆ ತುಂಬಿಕೊಳ್ಳುತ್ತಿದ್ದವು. ಒಂದು ಬೆಡ್‌ರೂಮಿನಲ್ಲಿ ವೇಫರಿಂಗ್ ಹೊಗೆಗಳ ನಡುವೆ, ಮಾರ್ವಾನಾ ಅಮಲಿನಲ್ಲಿ ಕೆಲವು ಜೋಡಿಗಳು ತೂಗುತ್ತಿದ್ದವು.

ಕೇಟರಿಂಗ್ ಮಾಡಿರುವ ಫುಡ್ ಕಿಚನ್ ಟೇಬಲ್ ಮೇಲೆ, ಮತ್ತೊಂದು ಟೇಬಲ್ ಮೇಲೆ ಸ್ನಾಕ್ಸ್, ಚಿಪ್ಸ್. ಮಾರ್ಗರೆಟ್ ಶ್ರಿಯಾ ಇಬ್ಬರು ಒಂದೊಂದು ಬ್ಲೂ ಮೂನ್ ಬೀರ್ ಕ್ಯಾನ್ ತೆಗೆದುಕೊಂಡು ಪೂಲ್ ಹತ್ತಿರ ಸೇರಿದರು. ರಗ್ಬೀ ಟೀಮ್, ಫುಟ್ ಬಾಲ್ ಟೀಮ್ ಯಾವುದೋ ವಿಷಯದ ಬಗ್ಗೆ ತೀವ್ರವಾಗಿ ಚರ್ಚಿಸಿಕೊಳ್ಳುತ್ತಿದ್ದರು. ಫ್ಯಾನ್ಸ್ ಒಟ್ಟು ಎರಡು ಗುಂಪುಗಳಾಗಿ ಬದಲಾಗಿ ಚೀರಿಂಗ್ ಮಾಡುತ್ತಿದ್ದರು. ಹುಡುಗರ ಮೇಲೆ ಒರುಗುತ್ತಾ, ಬೀಳುವಂತೆ ನಿಂತಿರುವ ಹುಡುಗಿಯರು. ಅವರ ಸೊಂಟದ ಸುತ್ತಲೂ ಹುಡುಗರ ಕೈಗಳು. ಎಲ್ಲಾ ಕಾಲೇಜ್ ಪಾರ್ಟಿಗಳಂತೆಯೇ ಆ ಪಾರ್ಟಿ ಕೂಡಾ. ಸುತ್ತಲೂ ಇರುವ ಹುಡುಗರೆಲ್ಲರನ್ನೂ ಗಮನಿಸುತ್ತಿದ್ದಳು ಶ್ರಿಯಾ. ಕೆಲವರನ್ನು ಗುರ್ತು ಹಿಡಿದಳು. ಕೆಲವರನ್ನು ಹಿಂದೆಂದೂ ನೋಡದ ಕಾರಣದಿಂದ, ಮಾರ್ಗರೆಟ್‌ಳನ್ನು ಕೇಳಿ ತಿಳಿದುಕೊಳ್ಳುತ್ತಿದ್ದಳು.

ಕಾಲೇಜಿನ ಫೇಮಸ್ ಫುಟ್ ಬಾಲ್ ಪ್ಲೇಯರ್ ಬೆನ್ ಪಕ್ಕದಲ್ಲೇ ಒಂದು ಇಂಡಿಯನ್ ಫೇಸ್ ಕಾಣಿಸಿತು ಶ್ರಿಯಾಳಿಗೆ. ಹೆಸರು ತಿಳಿಯದಾದರೂ ಇದಕ್ಕೂ ಮೊದಲು ಅವನನ್ನು ನೋಡಿದ ನೆನಪು. ಶ್ರಿಯಾ ಅವರ ಕಡೆ ನೋಡುತ್ತಿರುವ ಸಮಯದಲ್ಲೇ ಬೆನ್– ಶ್ರಿಯಾಳ ಕಡೆಗೆ ನೋಡಿದ್ದರಿಂದ ಕಿರುನಗೆ ನಕ್ಕಳು. ಅಷ್ಟೇ. ಕೂಡಲೇ ಶ್ರೀಕರ್‌ನೊಂದಿಗೆ ಬಂದು ಶ್ರಿಯಾ, ಮಾರ್ಗರೆಟ್‌ರನ್ನು ಪರಿಚಯ ಮಾಡಿಕೊಂಡನು. ಬೆನ್‌ನಂಥಾ ಕಾಲೇಜ್ ಸೆಲಿಬ್ರಿಟಿ ಬಂದು ಮಾತನಾಡುತ್ತಿದ್ದರೆ ಶ್ರಿಯಾ, ಮಾರ್ಗರೆಟ್ ಒಳಗೊಳಗೆ ಹಿಗ್ಗಿ ಕುಣಿಯುತ್ತಿದ್ದರು. ಎಂದಿನಿಂದಲೋ ಪರಿಚಯವಿದ್ದವನಂತೆಯೇ ಬೆನ್ ಸಲಿಗೆಯಿಂದ ಶ್ರಿಯಾಳ ಪಕ್ಕದಲ್ಲೇ ಕುಳಿತುಕೊಂಡ. ಮಾರ್ಗರೆಟ್ ಪಕ್ಕದಲ್ಲಿ ಶ್ರೀಕರ್ ಸೇರಿದ. ಬೆನ್ ತುಂಬಾ ಹುಷಾರಾದ ಹುಡುಗ. ಅವನ ಜೋಕ್ಸ್‌ಗೆ ಶ್ರಿಯಾ ಬಿದ್ದುಬಿದ್ದು ನಕ್ಕಳು. ಅವರಿಬ್ಬರನ್ನು ನೋಡುವವರಿಗೆ ಅರ್ಧಗಂಟೆ ಹಿಂದಿನವರೆಗೂ ಅವರಿಗೆ ಪರಸ್ಪರ ಪರಿಚಯವಿರಲಿಲ್ಲವೆಂದರೆ ನಂಬಲಿಕ್ಕಿಲ್ಲ. ಅಷ್ಟು ಶೀಘ್ರವಾಗಿ ಕನೆಕ್ಟ್ ಆಗಿದ್ದರು ಅವರಿಬ್ಬರೂ. ಬೆನ್ ಸನಿಹದಲ್ಲಿರುವ ಸಂತಸ ಶ್ರಿಯಾಳಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಬೆನ್‌ಗಾಗಿ ಬಂದ ಹುಡುಗಿಯರು, ಅವನು ಶ್ರಿಯಾಳೊಡನೆ ಸನ್ನಿಹಿತನಾಗಿರುವನೆಂದು ನಿರಾಶೆಯಿಂದ ಹಿಂದಿರುಗಿದಾಗ ಶ್ರಿಯಾಳಲ್ಲಿ ಹೆಮ್ಮೆ.